# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್‌ಸಿ. 160/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀಮತಿ ಮಮತ | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ ಶ್ರೀ ಮಂಟೇಸ್ವಾಮಿ | | **08.01.2024** |
| ವಯಸ್ಸು | ಃ 40 ವರ್ಷ | | |
| ವೃತ್ತಿ | ಃ ಸೆಕ್ಯೂರಿಟಿ ಗಾರ್ಡ್ | ಪ್ರಾ.ಸಾ. ಃ | 01 |
| ವಾಸಸ್ಥಳ | ಃ ಯರಗನಹಳ್ಳಿ | ಚಾ.ಸಾ. ಃ | 01 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಮೃತ ಪ್ರಜ್ವಲ್ ನನ್ನ ಮಗನಿರುತ್ತಾನೆ. ಪ್ರಜ್ವಲ್ ನು ಮೈಸೂರಿನ ಅದ್ವೈತ ರೆಸಿಡೆನ್ಸಿ ಹೆಸರಿನ ಹೋಟೆಲ್ ನಲ್ಲಿ ರೂಂ ಬಾಯ್ ಆಗಿ ಕೆಲಸ ಮಾಡುತ್ತಿದ್ದ. ದಿಃ*13.01.2022* ರಂದು *ಬೆ.11* ಗಂಟೆಗೆ *2-3* ಜನ ವ್ಯಕ್ತಿಗಳು ಕಾರಿನಲ್ಲಿ ನಮ್ಮ ಮನೆ ಬಳಿ ಬಂದಿದ್ದರು. ಆ ವ್ಯಕ್ತಿಗಳು ನನ್ನ ಮಗನ ಬಗ್ಗೆ ವಿಚಾರಿಸಿದ್ದರು ಮತ್ತು ಆ ವ್ಯಕ್ತಿಗಳ ಪೈಕಿ ಒಬ್ಬ ವ್ಯಕ್ತಿಯ ಹೆಂಡತಿಗೆ ನನ್ನ ಮಗನ ಫೋನ್ ನಿಂದ ಫೋನ್ ಹೋಗಿರುವುದಾಗಿ ಹೇಳಿದ್ದರು. ಆಗ ನಾನು ನನ್ನ ಮಗ ಮನೆಯಲಿಲ್ಲ ಎಂದು ಹೇಳಿದಾಗ ಅವರು ನನಗೂ ಸಹ ಬೆದರಿಕೆ ಹಾಕಿದ್ದರು ಮತ್ತು ನನ್ನ ಮಗನನ್ನು ಇವತ್ತು ಬಿಡುವುದಿಲ್ಲ ಎಂದು ಹೇಳಿದ್ದರು. ನನ್ನ ಮಗ ಕೆಲಸ ಮಾಡುವ ಹೋಟೇಲ್ ಬಳಿ ಹೋಗುವುದಾಗಿ ಹೇಳಿದ್ದರು. ಆಗ ನಾನೇ ಅವರೊಂದಿಗೆ ನನ್ನ ಮಗ ಕೆಲಸ ಮಾಡುವ ಹೋಟೆಲ್ ಬಳಿ ಹೋಗಿದ್ದೆ. ಆ ಹೋಟೇಲ್ ಬಳಿ ಹೋಗುವವರೆಗೂ ಆ ವ್ಯಕ್ತಿಗಳು *2-3* ಜನ ಮಾತ್ರ ಇದುದ್ದರಿಂದ ಪೋ.ಠಾಣೆ ಬಳಿ ಹೋಗುವ ಸಲುವಾಗಿ ನನ್ನ ಮಗನನ್ನು ಕರೆದುಕೊಂಡು ಹೋಗಲು ಹೋಟೆಲ್ ಬಳಿ

ಹೋಗಿದ್ದೆ. ಅಲ್ಲಿಗೆ ಹೋದ ಬಳಿಕ ನಾನೇ ನನ್ನ ಮಗನನ್ನು ಆ ಹೋಟೇಲ್ ಮುಂಭಾಗದ ರಸ್ತೆಗೆ ಕರೆದುಕೊಂಡು ಬಂದಿದ್ದೆ. ಅಲ್ಲಿಗೆ ಬಂದ ಕೂಡಲೇ ಸೋಮಶೇಖರ ಮತ್ತು ಮಹದೇವ ನನ್ನ ಮಗನಿಗೆ ಹೊಡೆದಿದ್ದರು ಮತ್ತು ಅವರೊಂದಿಗೆ ಇನ್ನೂ 3 ಜನ ಇದ್ದರು. ಆ ಕಾಲಕ್ಕೆ ನಾನು ಸೋಮಶೇಖರ ಮತ್ತು ಮಹದೇವ ಇವರನ್ನು ನೋಡಿದ್ದೆ ಇನ್ನೂಳಿದ 3 ಜನರನ್ನು ಸಹ ನೋಡಿದ್ದೆ ಆದರೆ ಅವರ ಪರಿಚಯ ಇಲ್ಲ. ಸೋಮಶೇಖರ ಮತ್ತು ಮಹದೇವ ನನ್ನ ಮಗನನ್ನು ಕುರಿತು ನನ್ನ ಹೆಂಡತಿಗೆ ಪೋನ್ ಮಾಡುತ್ತೀಯಾ ಇವತ್ತು ನಿನ್ನನ್ನು ಬಿಡುವುದಿಲ್ಲ ಎಂದು ಹೀನಾಮಾನವಾಗಿ ಬೈದಿದ್ದರು. ಆ ಕಾಲಕ್ಕೆ ಅಕ್ಕಪಕ್ಕದ ಜನ ಜಗಳ ಬಿಡಿಸಿದ್ದರು.

2. ನಂತರ ನನ್ನ ಮಗ ಯೂನಿಫಾರಂ ಚೇಂಜ್ ಮಾಡಿ ಬರುವುದಾಗಿ ಹೋಟೇಲ್ ಒಳಗೆ ಹೋಗಿದ್ದ. ಆ ಕಾಲಕ್ಕೆ ನಾನು ರಿಸೆಪ್ಷನ್ ಬಳಿ ನಿಂತಿದ್ದೆ. ನಂತರ ಜೋರಾಗಿ ಶಬ್ದ ಕೇಳಿದಾಗ ನಾನು ಆ ಹೊಟೆಲ್ ಪಕ್ಕದಲ್ಲಿರು ರಾಜ್ ಕಮಲ್ ತಿಯೇಟರ್ ರಸ್ತೆಯ ಬಳಿ ಹೋಗಿ ನೋಡಿದಾಗ ಅಲ್ಲಿ ನನ್ನ ಮಗ ಹೋಟೆಲ್ ನ 4 ನೇ ಮಹಡಿಯಿಂದ ಕೆಳಗೆ ಬಿದಿದ್ದ. ಆ ರೀತಿ ಬಿದಿದ್ದರಿಂದ ನನ್ನ ಮಗನಿಗೆ ಎಡಕೈ ಮತ್ತು ಎಡ ಕಾಲು ಮುರಿದಿತ್ತು. ಆ ಕೂಡಲೇ ನನ್ನ ಮಗನನ್ನು ಯಾವುದೋ ಆಟೋದಲ್ಲಿ ಕೆ.ಆರ್.ಆಸ್ಪತ್ರೆರೆ ಕರೆದುಕೊಂಡು ಹೊಗಿದ್ದೆವು. ಅಲ್ಲಿ ವೈದ್ಯರು ಚಿಕಿತ್ಸೆ ನೀಡುತ್ತಿರುವಾಗ ನನ್ನ ಮಗ ಮರಣಹೊಂದಿದ್ದ. ಮರಣಹೊಂದಿದ್ದ ಸಮಯ 2 ಗಂಟೆ ಎಂದು ಅಂದುಕೊಂಡಿದ್ದೆ ಆದರೆ ನಂತರ ನನ್ನ ಮಗ 3.10 ಗಂಟೆಗೆ ಮರಣಹೊಂದಿದ್ದಾನೆ ಎಂದು ಗೊತ್ತಾಗಿತ್ತು. ನನ್ನ ಮಗ ಸೋಮಶೇಖರನ ಹೆಂಡತಿಗೆ ಪೋನ್ ಮಾಡಿದ್ದಾನೆ ಎನ್ನುವ ಕಾರಣಕ್ಕೆ ಸೋಮಶೇಖರ ಮತ್ತು ಮಹದೇವ ನನ್ನ ಮಗನಿಗೆ

ಹೀನಾಮಾನವಾಗಿ ಬೈದು ಹೊಡೆದಿದ್ದರಿಂದ ಅವಮಾನ ತಾಳಲಾರದೆ ನನ್ನ ಮಗ ಹೋಟೆಲ್ ಕಟ್ಟಡದ ಮೇಲಿನಿಂದ ಬಿದ್ದು ಮರಣ ಹೊಂದಿದ್ದಾನೆ. ನನ್ನ ಮಗ ಮರಣಹೊಂದಿದ ಬಳಿಕ ನಮ್ಮ ಸಂಬಂಧಿಗಳು ಆ ದಿನ ಗಲಾಟೆ ಮಾಡಿದ ವ್ಯಕ್ತಿಗಳ ಸಲುವಾಗಿ ಹುಡುಕಾಡಿದ್ದರು ಆದರೆ ಅವರು ಸಿಕ್ಕಿರಲಿಲ್ಲ.

*3.* ಅದೇ ದಿನ ರಾತ್ರಿ *8* ರಿಂದ *8.30* ಗಂಟೆಗೆ ನಾನು ಪೋ.ಠಾಣೆಗೆ ದೂರನ್ನು ಕೊಟ್ಟಿದ್ದೆ. ದೂರನ್ನು ನಾನು ಹೇಳಿದಂತೆ ಟೈಪ್ ಮಾಡಿಕೊಂಡಿದ್ದರು. ಈಗ ನಾನು ನೋಡುತ್ತಿರುವ ದೂರು ಅದೇ ಇದ್ದು ಅದರಲ್ಲಿನ ಸಹಿ ನನ್ನದು ಇದೆ. ಸದರಿ ದೂರನ್ನು ನಿ.ಪಿ-*1* ಮತ್ತು ಸಹಿಯನ್ನು ನಿ.ಪಿ-*1(ಎ)* ಎಂದು ಗುರುತಿಸಿದೆ. ಹೋಟೆಲ್ ಬಳಿ ಬಂದಿದ್ದ ಬೇರೆ ವ್ಯಕ್ತಿಗಳ ಹೆಸರು ಮತ್ತು ವಿಳಾಸ ಗೊತ್ತಿಲ್ಲ. ಸೋಮಶೇಖರ ಮತ್ತು ಮಹದೇವ ಇವರ ಹೆಸರು ಮಾತ್ರ ಗೊತ್ತಿದೆ. ದಿಃ*16.01.2022* ರಂದು ನಾನು ನನ್ನ ಮಗನ ಮರಣದ ಸಮಯ *3.10* ನಿಮಿಷ ಎನ್ನುವ ಬಗ್ಗೆ ಮರುಹೇಳಿಕೆ ಕೊಟ್ಟಿದ್ದೆ. ದಿಃ*08.07.2022* ರಂದು ನನ್ನನ್ನು ಪುನಃ ಪೋ.ಠಾಣೆಗೆ ಕರೆಸಿ ನನಗೆ ಸೋಮಶೇಖರ ಇವರನ್ನು ತೋರಿಸಿದ್ದರು. ನನ್ನ ಮಗನ ಮರಣದ ಮರುದಿನ ನನಗೆ ಸೋಮಶೇಖರ ಮತ್ತು ಮಹದೇವ ಇವರ ಹೆಸರುಗಳು ಗೊತ್ತಾಗಿತ್ತು. ದಿಃ*08.07.2022* ರಂದು ನಾನು ಸೋಮಶೇಖರನನ್ನು ಗುರುತಿಸಿ ಹೇಳಿಕೆ ಕೊಟ್ಟಿದ್ದೆ. ಆ ಕಾಲಕ್ಕೆ ಸೋಮಶೇಖರ ಮತ್ತು ಮಹದೇವ ಇಬ್ಬರೇ ನನ್ನ ಮಗನ ಸಾವಿಗೆ ಕಾರಣ ಎಂದು ಹೇಳಿಕೆ ಕೊಟ್ಟಿದ್ದೆ. ನಂತರ ದಿಃ*10.10.2022* ರಂದು ಇನ್ನೊಬ್ಬರು ಸಿಕ್ಕಿದ್ದಾರೆ ಗುರುತಿಸಿ ಎಂದು ನನ್ನನ್ನು ಪೋ.ಠಾಣೆಗೆ ಕರೆಸಿದ್ದರು ಆ ಕಾಲಕ್ಕೆ ನಾನು ಮಹದೇವ ಇವರನ್ನು ನೋಡಿ ಗುರುತಿಸಿದ್ದೆ ಮತ್ತು ಆ ಬಗ್ಗೆ ಹೇಳಿಕೆ ಕೊಟ್ಟಿದ್ದೆ.

*4.* ದಿಃ*13.01.2022* ರಂದು ನಾನು ಸೋಮಶೇಖರ ಇವರ ಕಾರಿನಲ್ಲಿಯೇ ನನ್ನ ಮಗ ಕೆಲಸ ಮಾಡುತ್ತಿದ್ದ ಹೋಟೆಲ್ ಬಳಿ ಹೋಗಿದ್ದೆ. ಆ ಕಾರನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ಪೋಟೋದಲ್ಲಿರುವ ಕಾರು ಅದೇ ಇರುತ್ತದೆ. ಸದರಿ ಪೊಟೋವನ್ನು ನಿ.ಪಿ-*2* ರಿಂದ *4* ಎಂದು ಗುರುತಿಸಿದೆ. ಹೋಟೆಲ್ ಬಳಿ ಗಲಾಟೆ ನಡೆದಾಗ ನನ್ನ ಮಗ ಸೋಮಶೇಖರನ ಹೆಂಡತಿಗೆ ಪೋನ್ ಮಾಡಿ ದುಡ್ಡು ಕೊಡುತ್ತೇನೆ ನನ್ನ ಹತ್ತಿರ ಬಾ ಎಂದು ಕರೆಯುತ್ತಿದ್ದ ಎಂದು ಆ ಸೋಮಶೇಖರ ಮತ್ತು ಮಹದೇವ ಹೇಳುತ್ತಿದ್ದರು. ಈಗ ಸೋಮಶೇಖರ ಮತ್ತು ಮಹದೇವ ಅವರನ್ನು ನೋಡಿದರೆ ಗುರುತಿಸುತ್ತೇನೆ.

*5.* ದೂರು ಕೊಟ್ಟ ದಿನ ಪೋಲೀಸರು ನನ್ನ ಮಗನನ್ನು ನೋಡಲು ಬಂದಿದ್ದರು ಮತ್ತು ಘಟನೆ ನಡೆದ ಹೋಟೇಲ್ ಬಳಿ ಸಹ ಹೋಗಿ ನೋಡಿದ್ದರು. ಆ ಕಾಲಕ್ಕೆ ನಾನು ಸಹ ಅಲ್ಲಿಗೆ ಹೋಗಿದ್ದೆ. ಆ ಕಾಲಕ್ಕೆ ಅಲ್ಲಿ ಬರೆದುಕೊಂಡು ನನ್ನ ಸಹಿ ಪಡೆದಿದ್ದರು. ಈಗ ನಾನು ನೋಡುತ್ತಿರುವ ಮಹಜರ್ ಅದೇ ಇದ್ದು ಅದರಲ್ಲಿನ ಸಹಿ ನನ್ನದು ಇದೆ. ಸದರಿ ಮಹಜರ್ ನಿಪಿ-*5* ಮತ್ತು ಸಹಿಯನ್ನು ನಿ.ಪಿ-*5(*ಎ*)* ಎಂದು ಗುರುತಿಸಿದೆ. ಆ ಮಹಜರ್ ಅನ್ನು ಅಂದಾಜು ರಾತ್ರಿ *7.30* ರ ವೇಳೆಯಲ್ಲಿ ಬರೆದಿರಬಹುದು. ಪೋ.ಠಾಣೆಯಲ್ಲಿ ಹೇಳಿಕೆ ಕೊಟ್ಟ ಬಗ್ಗೆ ಮುಚ್ಚಳಿಕೆ ಪತ್ರಕ್ಕೆ ಸಹಿ ಹಾಕಿದ್ದೆ.

**ಪಾಟೀ ಸವಾಲು ಃ ಆರೋಪಿ ಪರ ವಕೀಲರು ಸಮಯ ಕೋರಿದ್ದು ಸೂಕ್ತ ಕಾರಣ ಹೇಳದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

ಮರು ವಿಚಾರಣೆಃ- ಇಲ್ಲ.

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***